
ಕಲಿಯುವ ಕಲೆ...

# ಸುಂದರಬನ

೧



ಫೋಟೋ: ಸರಸ್ವತಿ ಮೋಕಾಶಿ, ಧ್ವನಿ ಬಳಗ

ವಿದ್ಯಾರ್ಥಿ/ ವಿದ್ಯಾರ್ಥಿನಿಯ ಹೆಸರು : ..............................

ಶಾಲೆಯ ಹೆಸರು : ..............................

ಶಿಕ್ಷಕರು/ಮಕ್ಕಳು/ಪಾಲಕರಲ್ಲಿ ನಿವೇದನೆ:
'ಸುಂದರಬನ'ದಲ್ಲಿ ಸುಂದರ ಕಲಿಕಾ ಅನುಭವ ಪಡೆಯಲು ಮೊದಲು ಬೆನ್ನುಪುಟ ಮತ್ತು ಆಯಾ ಪುಟಗಳಲ್ಲಿ ಕೊಟ್ಟಿರುವ 'ನಮ್ಮ ಆಶಯ'ವನ್ನು ಮೊದಲು ಗಮನಿಸಿ. ಆ ಪ್ರಕಾರ ಚಟುವಟಿಕೆಗಳನ್ನು ಮಾಡಿರಿ/ಮಾಡಿಸಿರಿ.


ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಜನವರಿ – ಫೆಬ್ರವರಿ – ಮಾರ್ಚ್ ೨೦೨೫

ಆರಂಭ ಯೋಜನೆ
Arambha 2024-25 Project is Supported by Many Individual Donors

# ಕಥೆ ಕಟ್ಟೋಣ ಬನ್ನಿ




ಖುಷಿ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಮೇಲಿನ ಚಿತ್ರಗಳನ್ನು ಗಮನಿಸಲಿ. ತಮ್ಮದೇ ಆದ ರೀತಿಯಲ್ಲಿ ಕಥೆ ಕಟ್ಟಿ ಹೇಳಲು ಪ್ರಯತ್ನಿಸಲಿ. ಕೊಟ್ಟಿರುವ ಗೆರೆಯ ಮೇಲೆ, ಕಥೆಯಲ್ಲಿ ಬರುವ ಸರಳ ಪದಗಳನ್ನು ಬರೆಯಲಿ.

**ಭಾಷಾ ಚೌಕ**

ನದಿ – **River** (ರಿವರ್)
ಉರುಳು – **Roll** (ರೋಲ್)
ಆಮೆ – **Turtle** (ಟರ್ಟಲ್)
ಕರಡಿ – **Bear** (ಬೇರ್)

# ಕಣ್ಣುರುಕು




ಮುತಿ ಕಲಿಕೆಗಾಗಿ


**ನಮ್ಮ ಆಶಯ:**
ಮೇಲಿನ ಎರಡು ಚಿತ್ರಗಳು ನೋಡುವುದಕ್ಕೆ ಒಂದೇ ತರಹ ಕಂಡರೂ ಅವುಗಳಲ್ಲಿ ಆರು ವ್ಯತ್ಯಾಸಗಳಿವೆ. ಮಕ್ಕಳು ಅವುಗಳನ್ನು ಗುರುತಿಸಲಿ. ನಂತರ ಚಿತ್ರಕ್ಕೆ ಬಣ್ಣ ಹಚ್ಚಲಿ. ಕೊಟ್ಟಿರುವ ಖಾಲಿ ಜಾಗದಲ್ಲಿ ತಮ್ಮ ಮನೆ/ಶಾಲಾ ಅಂಗಳದ ಚಿತ್ರ ಬರೆದು, ಬಣ್ಣ ಹಚ್ಚಲಿ.

**ಭಾಷಾ ಚೌಕ**

**ಬೆಟ್ಟ/ಗುಡ್ಡ – Hill** (ಹಿಲ್)
**ದಾರಿ – Path** (ಪಾತ್)
**ಹುಲ್ಲು – Grass** (ಗ್ರಾಸ್)

# ಬಣ್ಣದಾಟ







ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಮೇಲಿನ ಚಿತ್ರವನ್ನು ಗಮನಿಸಲಿ. ಅಲ್ಲಿರುವ ಆಕೃತಿಗಳನ್ನು ಶಿಕ್ಷಕರ/ಪಾಲಕರ ಸಹಾಯದಿಂದ ಗುರುತಿಸಲಿ. ನಂತರ ಸೂಚನಾ ಪಟ್ಟಿಯನ್ನು ಅನುಸರಿಸಿ, ಚಿತ್ರಕ್ಕೆ ಬಣ್ಣ ಹಚ್ಚಲಿ. ಖಾಲಿ ಜಾಗದಲ್ಲಿ ಇಂತಹ ಆಕೃತಿಗಳನ್ನು ಬಳಸಿ, ಚಿತ್ರಗಳನ್ನು ಬರೆಯಲು ಪ್ರಯತ್ನಿಸಲಿ.

| ಭಾಷಾ ಚೌಕ |
|---|
| **ತ್ರಿಭುಜ – Triangle** (ಟ್ರೈಆ್ಯಂಗಲ್) |
| **ವೃತ್ತ – Circle** (ಸರ್ಕಲ್) |
| **ಚೌಕ – Square** (ಸ್ಕ್ವೇರ್) |
| **ಆಯತ – Rectangle** (ರೆಕ್ಟ್ಯಾಂಗಲ್) |

# ಚುಕ್ಕಿಯಾಟ



**ನಮ್ಮ ಆಶಯ:**
ಚುಕ್ಕಿಚಿತ್ರದಲ್ಲಿ 1ರಿಂದ 45ರವರೆಗಿನ ಸಂಖ್ಯೆಗಳನ್ನು ಕ್ರಮವಾಗಿ ಸೇರಿಸಿ, ಬಣ್ಣ ಹಚ್ಚಲಿ. ನಂತರ ಮೂಡುವ ಚಿತ್ರದ ಕುರಿತು ಮಕ್ಕಳು ಮಾತನಾಡಲಿ. ತಮಗಿಷ್ಟವಾದ ಕೀಟಗಳ ಹೆಸರುಗಳನ್ನು ಹೇಳಲಿ.

| ಭಾಷಾ ಚೌಕ |
| --- |
| ಚಿಟ್ಟೆ/ಪಾತರಗಿತ್ತಿ – **Butterfly** (ಬಟರ್‌ಫ್ಲೈ) |
| ಬಲೆ – **Net** (ನೆಟ್) |

# ಹಾಡು – ಕುಣಿ

## ಆನೆ

ಆನೆ ಬಹಳ ದೊಡ್ಡದು
ಅದರ ಬಾಲ ಗಿಡ್ಡದು
ಕಣ್ಣು ಸಣ್ಣ ಸಣ್ಣದು
ಚರ್ಮ ಬೂದು ಬಣ್ಣದು


ಉದ್ದದೊಂದು ಸೊಂಡಿಲು
ದಿಮ್ಮಿ ಎತ್ತಿಕೊಳ್ಳಲು
ಅಗಲ ಅಗಲ ಕಿವಿಗಳು
ಗಾಳಿ ಬೀಸಿಕೊಳ್ಳಲು


ಆನೆ ಬರಲಿ ಊಟಕೆ
ದಿನವು ನಮ್ಮ ತೋಟಕೆ
ಕಬ್ಬು ತಂದು ಇಡುವೆನು
ಹಲಸು ತಂದು ಕೊಡುವೆನು


ಆನೆ ಮೇಲೆ ಹತ್ತುವೆ
ಕಾಡನೆಲ್ಲ ಸುತ್ತುವೆ
ದೇಹವೆಲ್ಲ ದಣಿಯಲಿ
ಮನಸು ಹಿಗ್ಗಿ ಕುಣಿಯಲಿ!

**– ರಾಜಶೇಖರ ಕುಕ್ಕುಂದಾ**
**ಆಕರ: ಬಿಸಿ ಬಿಸಿ ಬಾತು ಮಕ್ಕಳ ಪದ್ಯಗಳು**
**ಪ್ರಕಾಶನ: ಅವ್ಯಕ್ತ ಪ್ರಕಾಶನ**
**ಮೊ.ನಂ: 9986590894**

ಖುಷಿ ಕಲಿಕೆಗಾಗಿ








| ಭಾಷಾ ಚೌಕ |
| --- |
| **ಆನೆ – Elephant** (ಎಲಿಫ಼ಂಟ್) |
| **ಸೊಂಡಿಲು – Trunk** (ಟ್ರಂಕ್) |
| **ದಂತ – Tusk** (ಟಸ್ಕ್) |
| **ಕಬ್ಬು – Sugarcane** (ಶುಗರ್‌ಕೇನ್) |
| **ಹಲಸಿನಹಣ್ಣು – Jackfruit** (ಜ್ಯಾಕ್‌ಫ್ರೂಟ್) |

**ನಮ್ಮ ಆಶಯ:**
ಮಕ್ಕಳು ಮೇಲಿನ ಚಿತ್ರಗಳಿಗೆ ಬಣ್ಣ ಹಚ್ಚಲಿ. ಕೊಟ್ಟಿರುವ ಪದ್ಯವನ್ನು ಹಾಡಲಿ. ನಂತರ ಆನೆಯ ಆಹಾರ, ಕೂಗುವಿಕೆ ಮತ್ತು ಅದರ ವಾಸದ ಕುರಿತು ಮಾತನಾಡಲಿ.

# ಸಂಖ್ಯಾಬಣ್ಣದಾಟ



**ಸೂಚನಾ ಪಟ್ಟಿ**

1. ಹಳದಿ ಬಣ್ಣ
2. ಕೇಸರಿ ಬಣ್ಣ
3. ಹಸಿರು ಬಣ್ಣ
4. ಕೆಂಪು ಬಣ್ಣ
5. ನೇರಳೆ ಬಣ್ಣ
6. ಆಕಾಶನೀಲಿ ಬಣ್ಣ
7. ಗುಲಾಬಿ ಬಣ್ಣ

ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಸೂಚನಾ ಪಟ್ಟಿಯನ್ನು ಅನುಸರಿಸಿ, ಕೊಟ್ಟಿರುವ ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ಹೂವುಗಳ ಕುರಿತು ಮಾತನಾಡಲಿ. ಕೊಟ್ಟಿರುವ ಗೆರೆಯ ಮೇಲೆ ತಾವು ನೋಡಿರುವ ಹೂವುಗಳ ಹೆಸರುಗಳನ್ನು ಬರೆಯಲು ಪ್ರಯತ್ನಿಸಲಿ.

**ಭಾಷಾ ಚೌಕ**

ಹೂವು – **Flower** (ಫ್ಲಾವರ್)
ದಳ/ಎಸಳು – **Petal** (ಪೆಟಲ್)
ಎಲೆ – **Leaf** (ಲೀಫ್)
ಸಂಖ್ಯೆ/ಅಂಕಿ – **Number** (ನಂಬರ್)

# ಬಣ್ಣದಾಟ

ಸಾಂದರ್ಭಿಕ ಕಲಿಕೆಗಾಗಿ




| ಭಾಷಾ ಚೌಕ |
| --- |
| **ಪಕ್ಷಿ – Bird** (ಬರ್ಡ್) |
| **ಬಾವುಟ – Flag** (ಫ್ಲ್ಯಾಗ್) |

**ನಮ್ಮ ಆಶಯ:**
ಮಕ್ಕಳು ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ತಮ್ಮ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಿದರ ಕುರಿತು ಮಾತನಾಡಲಿ.

# ಜಾಲದಾಟ

ಮುಕ್ತ ಕಲಿಕೆಗಾಗಿ



| ಭಾಷಾ ಚೌಕ |
| --- |
| **ಪ್ರಾಣಿ – Animal** (ಆ್ಯನಿಮಲ್) |
| **ಹಡಗು – Ship** (ಷಿಪ್) |
| **ಮೋಡ – Cloud** (ಕ್ಲೌಡ್) |
| **ಸಮುದ್ರ – Sea** (ಸೀ) |

**ನಮ್ಮ ಆಶಯ:**
ಎಲ್ಲಾ ಪ್ರಾಣಿಗಳು, ಸಮುದ್ರದಲ್ಲಿರುವ ಹಡಗನ್ನು ತಲುಪಬೇಕಾಗಿದೆ. ಅವುಗಳಿಗೆ ಮಕ್ಕಳು ಸರಿಯಾದ ದಾರಿ ತೋರಿಸಿ ಸಹಾಯ ಮಾಡಲಿ.

# ಬಣ್ಣದಾಟ




ಮುಕ್ತ ಕಲಿಕೆಗಾಗಿ

| ಭಾಷಾ ಚೌಕ |
| --- |
| ಮರ – **Tree** (ಟ್ರೀ) |
| ಕೊಂಬೆ – **Branch** (ಬ್ರಾಂಚ್) |
| ದುರ್ಬೀನು – **Binocular** (ಬೈನಾಕ್ಯುಲರ್) |
| ನೋಡು – **See** (ಸೀ) |

**ನಮ್ಮ ಆಶಯ:**
ಮಕ್ಕಳು ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ಆ ಚಿತ್ರದ ಕುರಿತಾದ ಒಂದು ಪುಟ್ಟ ಕತೆಯನ್ನು ಕಟ್ಟಿ, ಕೊಟ್ಟಿರುವ ಗೆರೆಯ ಮೇಲೆ ಬರೆಯಲು ಪ್ರಯತ್ನಿಸಲಿ.

# ಮಂಡಲಕಲೆ




ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:**

ಮಕ್ಕಳು ಮೊದಲು ಚಿತ್ರವನ್ನು ಗಮನವಿಟ್ಟು ನೋಡಲಿ. ನಂತರ ತಮಗಿಷ್ಟವಾದ ಬಣ್ಣಗಳನ್ನು ತೆಗೆದುಕೊಂಡು ಪ್ರತಿಯೊಂದು ಭಾಗಕ್ಕೂ ಪ್ರತ್ಯೇಕವಾಗಿ ಹಚ್ಚುತ್ತಾ ಹೋಗಲಿ. ಈ ಚಟುವಟಿಕೆಯನ್ನು ಒಂದೇ ಸಲಕ್ಕೆ ಮುಗಿಸಬೇಕೆನ್ನುವ ಒತ್ತಾಯವಿಲ್ಲ. ತಮ್ಮ ಬಿಡುವಿನ ವೇಳೆಯಲ್ಲಿಯೂ ಸ್ವಲ್ಪ ಸ್ವಲ್ಪ ಮಾಡಬಹುದು. ಆದರೆ ಇದನ್ನು ಮಾಡುವಾಗ ಆದಷ್ಟು ಇದನ್ನೇ ಗಮನಿಸಲಿ.

# ಶಿವರಾತ್ರಿ ಹಬ್ಬದ ಶುಭಾಶಯಗಳು




ಸಾಂದರ್ಭಿಕ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಚಿತ್ರವನ್ನು ಗುರುತಿಸಿ ಬಣ್ಣ ಹಚ್ಚಲಿ. ನಂತರ ಅವರ ಮನೆ/ಪಕ್ಕದ ಮನೆಗಳಲ್ಲಿ ಶಿವರಾತ್ರಿ ಹಬ್ಬವನ್ನು ಆಚರಿಸುವ ಕುರಿತು ಮಾತನಾಡಲಿ.

| ಭಾಷಾ ಚೌಕ |
|---|
| ಹಾವು – **Snake** (ಸ್ನೇಕ್) |
| ಕಮಲ – **Lotus** (ಲೋಟಸ್) |
| ಡಮರು – **Drum** (ಡ್ರಮ್) |
| ಮನೆ – **House** (ಹೌಸ್) |

## ಪೂರ್ಣದಡೆಗೆ..






ಅಕ್ಷರ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಕೊಟ್ಟಿರುವ ಅರ್ಧ ಚಿತ್ರ ಮತ್ತು ಪದಗಳನ್ನು ಪೂರ್ಣಗೊಳಿಸಲಿ. ನಂತರ ಚಿತ್ರಕ್ಕೆ ಬಣ್ಣ ಹಚ್ಚಲಿ.

# ಗುರುತಿಸುವಾಟ






ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಮೇಲಿನ ಚಿತ್ರವನ್ನು ಗಮನಿಸಲಿ. ನಂತರ ಕೆಳಗೆ ಆಯತದಲ್ಲಿರುವ ವಸ್ತುಗಳು ಆ ಚಿತ್ರದಲ್ಲಿ ಅಡಗಿಕೊಂಡಿವೆ. ಅವುಗಳನ್ನು ಮಕ್ಕಳು ಬಣ್ಣಗಳನ್ನು ಹಚ್ಚುವುದರ ಮೂಲಕ ಗುರುತಿಸಲಿ. ಅನಂತರ ತಾವು ನೋಡಿರುವ ಪ್ರಾಣಿಗಳ ಹೆಸರನ್ನು ಹೇಳಲಿ.

**ಭಾಷಾ ಚೌಕ**

**ಪಂಡಾ – Panda** (ಪಂಡಾ)
**ಗುರುತಿಸು – Identify** (ಐಡೆನ್‌ಟಿಫೈ)

# ಬಣ್ಣದಾಟ



**ಯಾವ ಯಾವ ಹಣ್ಣುಗಳು ಎಷ್ಟಿವೆ?**

1. ಕಲ್ಲಂಗಡಿ ..............................
2. ದ್ರಾಕ್ಷಿ ..............................
3. ಸ್ಟ್ರಾಬರಿ ..............................
4. ಕಿತ್ತಳೆ ..............................
5. ಸೇಬು ..............................

ಮುಕ್ತ ಕಲಿಕೆಗಾಗಿ

**ಭಾಷಾ ಚೌಕ**

**ಹಣ್ಣು – Fruit (ಫ್ರೂಟ್)**

**ನಮ್ಮ ಆಶಯ:**

ಮಕ್ಕಳು ಚಿತ್ರದಲ್ಲಿರುವ ಹಣ್ಣುಗಳಿಗೆ ಬಣ್ಣ ಹಚ್ಚಲಿ. ನಂತರ ಯಾವ ಯಾವ ಹಣ್ಣುಗಳು ಎಷ್ಟು ಇವೆ. ಎಂಬುದನ್ನು ಎಣಿಸಿ, ಅವುಗಳ ಹೆಸರುಗಳ ಮುಂದೆ ಬರೆಯಲಿ. ಅನಂತರ ಖಾಲಿ ಇರುವ ಜಾಗದಲ್ಲಿ ತಮಗಿಷ್ಟವಾದ ಹಣ್ಣಿನ ಚಿತ್ರ ಬರೆದು ಬಣ್ಣ ಹಚ್ಚಲಿ.

# ಕಲಾ ಕ್ಷೇತ್ರ...





ಡಾ.ದ.ರಾ.ಬೇಂದ್ರೆಯವರು ರಚಿಸಿರುವ ಯುಗಾದಿ ಹಾಡನ್ನು ಕೇಳಲು ಈ ಕೆಳಗಿನ QR ಕೋಡ್‌ನ್ನು ಬಳಸಿ.


**ನಮ್ಮ ಆಶಯ:**
ಮಕ್ಕಳು ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ಯುಗಾದಿ ಹಬ್ಬಕ್ಕೆ ಸಂಬಂಧಿಸಿದ ಚಿತ್ರವನ್ನು ಬರೆದು ಬಣ್ಣ ಹಚ್ಚಲಿ. ಅನಂತರ ಯುಗಾದಿ ಹಬ್ಬದಂದು ತಮ್ಮ ಮನೆಯಲ್ಲಿ ಮಾಡುವ ತಿಂಡಿಗಳ ಹೆಸರನ್ನು ಹೇಳಲಿ.

**ಭಾಷಾ ಚೌಕ**


ಮಾವು – **Mango** (ಮ್ಯಾಂಗೋ)
ಬೇವು – **Neem** (ನೀಮ್)
ಬೆಲ್ಲ – **Jaggery** (ಜಾಗರಿ)

# ಒತ್ತಕ್ಷರದಾಟ


**ಕಪೆ** ________




**ಕಣು** ________




**ಕತೆ** ________



**ಬೆಕು** ________



**ಹಗ** ________



**್ಗ ್ತ ್ಕ ್ಪ ್ಣ**

| ಭಾಷಾ ಚೌಕ |
|---|
| ಕಪ್ಪೆ – **Frog** (ಫ್ರಾಗ್) |
| ಕಣ್ಣು – **Eye** (ಐ) |
| ಕತ್ತೆ – **Donkey** (ಡಾಂಕಿ) |
| ಬೆಕ್ಕು – **Cat** (ಕ್ಯಾಟ್) |
| ಹಗ್ಗ – **Rope** (ರೋಪ್) |

**ನಮ್ಮ ಆಶಯ:**
ಮಕ್ಕಳು ಮೇಲೆ ಕೊಟ್ಟಿರುವ ಪದಗಳನ್ನು ಗಟ್ಟಿಸಿ/ಜೋರಾಗಿ ಓದಲಿ. ಆಮೇಲೆ ಬೂದು ಬಣ್ಣದ ಪಟ್ಟಿಯಲ್ಲಿ ಕೊಟ್ಟಿರುವ ಒತ್ತಕ್ಷರವನ್ನು ಆಯ್ದು ಪದಗಳಿಗೆ ಸೇರಿಸಿ ಓದಲಿ. ನಂತರ ಗೆರೆಗಳ ಮೇಲೆ ಬರೆದು ಮತ್ತೊಮ್ಮೆ ಜೋರಾಗಿ ಓದುವ ಮೂಲಕ ಆಗುವ ವ್ಯತ್ಯಾಸ ಕಂಡು ಹಿಡಿಯಲಿ.

# ಬಣ್ಣದಾಟ



ಸಾಂದರ್ಭಿಕ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ತಮ್ಮ ಊರುಗಳಲ್ಲಿ ಹೋಳಿ ಹಬ್ಬವನ್ನು ಆಚರಿಸಿದರ ಕುರಿತು ಮಕ್ಕಳು ಮಾತನಾಡಲಿ.

**ಭಾಷಾ ಚೌಕ**

ಬಣ್ಣ – **Colour** (ಕಲರ್)
ಎರಚು – **Splash** (ಸ್ಪ್ಲಾಷ್)
ಪಿಚಕಾರಿ – **Squirt** (ಸ್ಕ್ವರ್ಟ್)


# ಬಣ್ಣದಾಟ



**ನಮ್ಮ ಆಶಯ:**
ಮಕ್ಕಳು ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ತಮ್ಮ ಶಾಲೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಿದರ ಕುರಿತು ಮಾತನಾಡಲಿ. ಮತ್ತು ಅವರಿಗಿರುವ ಬಿರುದುಗಳನ್ನು ತಿಳಿದುಕೊಳ್ಳಲಿ. ಅವರ ಕುರಿತಾದ ಒಂದೆರಡು ವಾಕ್ಯಗಳನ್ನು ಬರೆಯಲು ಪ್ರಯತ್ನಿಸಲಿ.

# ಕರಕುಶಲ – ಕಾರ್

1. ಮೊದಲು ಕಾರ್‌ಗೆ ಕ್ರೆಯಾನ್/ಬಣ್ಣದ ಪೆನ್ಸಿಲ್‌ನಿಂದ ನಿನಗಿಷ್ಟವಾದ ಬಣ್ಣ ಹಚ್ಚು.
2. ಕಾರ್ ಇರುವ ಹಾಳೆಯನ್ನು ಕತ್ತರಿಯ ಸಹಾಯದಿಂದ ಬೇರ್ಪಡಿಸು.
3. ಈಗ ಕಾರ್ ಸುತ್ತಲೂ ಇರುವ ದಪ್ಪ ಗೆರೆಯ ಮೇಲೆ ಕತ್ತರಿಸಿಕೊ.
4. ಕಾರ್ ಚಿತ್ರದಲ್ಲಿ ಚುಕ್ಕಿಗಳಿರುವ ಜಾಗದಲ್ಲಿ ಸರಿಯಾಗಿ, ನಿಧಾನವಾಗಿ ಮಡಚು.
5. ಚಿತ್ರದ ಅಂಚಿನಲ್ಲಿ 'ಅಂಟಿಸು' ಬರೆದಿರುವ ಜಾಗದಲ್ಲಿ ಅಂಟಿನಿಂದ ಸರಿಯಾಗಿ ಅಂಟಿಸು.
6. ಈಗ ನಿನ್ನ ಕೈಯಲ್ಲಿ ಒಂದು ಆಟಿಕೆ ಕಾರ್ ಸಿದ್ಧ. ಈ ನಿನ್ನ ಕಾರಿಗೆ ಒಂದು ಹೆಸರು ಕೊಡು.





ಆರೋಗ್ಯ ಮತ್ತು ಪರಿಸರ: 'ಸಾರಿಗೆ' ಪಾಠಕ್ಕೆ ಪೂರಕ

# ಕಣ್ಣರಳಿಸಿ ನೋಡು



ಮುಷಿ ಕಲೆಕಾಗಿ



**ನಮ್ಮ ಆಶಯ:**

ಮಕ್ಕಳು, ಚಿತ್ರಗಳನ್ನು ಉಲ್ಟಾ ಪಲ್ಟಾ ಮಾಡಿ ನೋಡಿ ಆನಂದಿಸಲಿ.

# ಬಣ್ಣದಾಟ






ಸಾಂದರ್ಭಿಕ ಕಲಿಕೆಗಾಗಿ

| ಭಾಷಾ ಚೌಕ |
| --- |
| **ಮಸೀದಿ – Mosque** (ಮಾಸ್ಕ್) |
| **ಹಬ್ಬ – Festival** (ಫೆಸ್ಟಿವೆಲ್) |

**ನಮ್ಮ ಆಶಯ:**
ಮಕ್ಕಳು ಮೇಲಿನ ಸನ್ನಿವೇಶವನ್ನು ಗಮನಿಸಿ, ಬಣ್ಣ ಹಚ್ಚಲಿ. ರಂಜಾನ್ ಹಬ್ಬವನ್ನು ನಿಮ್ಮ ಮನೆ/ಊರು/ಸ್ನೇಹಿತರ ಮನೆಗಳಲ್ಲಿ ಹೇಗೆ ಆಚರಣೆ ಮಾಡುತ್ತಾರೆ ಎಂಬುದರ ಕುರಿತು ತರಗತಿಯಲ್ಲಿ ಮಾತನಾಡಲಿ.

# ಚಿತ್ರಕಥಾಪಟ

(ಆಧಾರಿತ ಚಟುವಟಿಕೆ)




ಖುಷಿ ಕಲಿಕೆಗಾಗಿ

1. ನೀನು ಕೋತಿಯನ್ನು ನೋಡಿದ್ದೀಯಾ?

2. ನೋಡಿದ್ದರೆ ಯಾವ ಯಾವ ಬಣ್ಣದ ಕೋತಿಗಳನ್ನು ನೋಡಿದ್ದೀಯಾ?

4. ನಿಮ್ಮ ಮನೆಯ ಹಿತ್ತಲಲ್ಲಿ ಕೋತಿ ಬಂದರೆ ಏನು ಮಾಡುವೆ?

5. ಕಥೆಯಲ್ಲಿ ಕೋತಿ ತನ್ನ ತಂದೆ ತಾಯಿಯ ಮಾತನ್ನು ಕೇಳದೆ ಇರೋದಕ್ಕೆ ಏನಾಯ್ತು?

6. ನೀನು ನಿನ್ನ ತಂದೆ ತಾಯಿ ಹೇಳಿದ ಮಾತನ್ನು ಕೇಳುವೆಯಾ?

**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ತಿಮ್ಮ' ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕಥೆಯನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.

# ಕವನ ಚಿತ್ರಪಟ
## (ಆಧಾರಿತ ಚಟುವಟಿಕೆ)




1. ನಿನಗೂ ರಾತ್ರಿ ನಿದ್ದೆಯಲ್ಲಿ ಕನಸುಗಳು ಬಿಳುತ್ತವೆಯೆ?


2. ಯಾವ ಯಾವ ತರದ ಕನಸುಗಳು ಬಿಳುತ್ತವೆ? ಒಂದನ್ನು ತರಗತಿಯಲ್ಲಿ ಹಂಚಿಕೊ.

3. ನೀನು ಕನಸಿನಲ್ಲಿ ಏನೆಲ್ಲಾ ಸುತ್ತಾಡಿ ಬಂದೆ? ಮಾತನಾಡು.

4. ಈ ಕವನ ಚಿತ್ರಪಟದಲ್ಲಿಯ ನಿನಗಿಷ್ಟವಾದ ಒಂದು ಚಿತ್ರವನ್ನು ಬರೆಯಲು ಪ್ರಯತ್ನಿಸು.

**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ಹೀಗಾಯ್ತು ಒಂದು ದಿನ' ಕವನ ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕವನವನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.

# ಸಂಖ್ಯಾಬಣ್ಣದಾಟ




ಖುಷಿ ಕಲಿಕೆಗಾಗಿ

**ಸೂಚನಾ ಪಟ್ಟಿ**

5. ಕೆಂಪು ಬಣ್ಣ
2. ಕಂದು ಬಣ್ಣ
3. ಹಸಿರು ಬಣ್ಣ
6. ಬಿಳಿ ಬಣ್ಣ

______________________ ______________________

______________________ ______________________


______________________ ______________________

______________________ ______________________

**ನಮ್ಮ ಆಶಯ:**

ಮಕ್ಕಳು ಚಿತ್ರವನ್ನು ಗಮನಿಸಲಿ. ಅಲ್ಲಿರುವ ಸಂಕಲನ ಮತ್ತು ವ್ಯವಕಲನ ಲೆಕ್ಕಗಳನ್ನು ಶಿಕ್ಷಕರ/ಪಾಲಕರ ಸಹಾಯದಿಂದ ಮಾಡಿ, ಬಂದ ಉತ್ತರಕ್ಕೆ ಸೂಚನಾ ಪಟ್ಟಿಯನ್ನು ಅನುಸರಿಸಿ, ಬಣ್ಣ ಹಚ್ಚಲಿ. ನಂತರ ತಮಗಿಷ್ಟವಾದ ಹಣ್ಣುಗಳ ಹೆಸರುಗಳನ್ನು ಕೊಟ್ಟಿರುವ ಗೆರೆಯ ಮೇಲೆ ಬರೆಯಲಿ.

# ಬಣ್ಣದಾಟ



ಮಜ ಕಲಿಕೆಗಾಗಿ

**ನಮ್ಮ ಆಶಯ:**

ಮಕ್ಕಳು ಕೊಟ್ಟಿರುವ ಚಿತ್ರವನ್ನು ಗಮನಿಸಲಿ. ಮೂರು ಹಾವುಗಳು ತಮ್ಮ ಬಣ್ಣಗಳನ್ನು ಕಳೆದುಕೊಂಡು ತಮ್ಮ ಬಾಲ ಯಾವುದು? ಎಂದು ಹುಡುಕಾಡುತ್ತಿವೆ. ಅವುಗಳಿಗೆ ಅವರದೇ ಆದ ಬಣ್ಣ ಹಚ್ಚಿ, ಸಹಾಯ ಮಾಡಲಿ. ನಂತರ ಹಾವುಗಳ ಆಹಾರ, ವಾಸ, ಕೂಗುವಿಕೆಯ ಕುರಿತು ಮಾತನಾಡಲಿ.

# ನೋಡು - ಮಾಡು



ಮಿತಿ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಚಿತ್ರವನ್ನು ಗಮನಿಸಲಿ. ನಂತರ ತಮ್ಮ ಪರಿಸರದಲ್ಲಿ ಸಿಗುಗ ಎಲೆ, ಕಡ್ಡಿಗಳನ್ನು ಬಳಸಿಕೊಂಡು ವಿವಿಧ ಕೀಟಗಳ ಆಕರಗಳನ್ನು ರಚಿಸಲು ಪ್ರಯತ್ನಿಸಲಿ.

ಇಲ್ಲಿನ ಕೆಲವು ಚಿತ್ರಗಳನ್ನು ವಿವಿಧ ಅಂತರ್ಜಾಲ ತಾಣಗಳಿಂದ ಕೃತಜ್ಞತಾಪೂರ್ವಕವಾಗಿ ತೆಗೆದುಕೊಂಡು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ.

ನಮ್ಮ ಆಶಯ:
೧ನೇ ತರಗತಿಯ ಮಕ್ಕಳಿಗಾಗಿಯೇ ವಿಶೇಷವಾಗಿ ರೂಪಿಸಲಾದ 'ಸುಂದರಬನ'ದಲ್ಲಿನ ಚಟುವಟಿಕೆ - ಆಟ ಇತ್ಯಾದಿಗಳೆಲ್ಲ ಸಾಧ್ಯವಾದಷ್ಟು ಮಟ್ಟಿಗೆ ಕನ್ನಡ-ಪರಿಸರ ಅಧ್ಯಯನ-ಗಣಿತ ವಿಷಯಗಳಿಗೆ ಪೂರಕವಾಗಿ ರೂಪುಗೊಂಡಿವೆ ಎಂಬುದನ್ನು ತಾವು ಗಮನಿಸಬೇಕು.


**ಸಂಪರ್ಕ ಮಾಹಿತಿ:**
**ಧ್ವನಿ**
**ಶೈಕ್ಷಣಿಕ ಸಂಪನ್ಮೂಲ ಕೇಂದ್ರ**
**# ೭೬, 'ಪುಷ್ಪಾಂಜಲಿ'**
**೩ನೇ ಅಡ್ಡರಸ್ತೆ, ಶಿವಗಿರಿ**
**ಧಾರವಾಡ - ೫೮೦ ೦೦೭**
**ಮೊ: ೯೫೮ ೬೬೬ ೧೦೫೫**
**dhwanitrust@gmail.com**
**www.dhwanitrust.org**





ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.